

ಅಳುಕಿತು. ಅತ್ಯಪ್ಪಟವಾದ ಅವಳ ಕಾಳಜಿಯೆದುರು ತಗ್ಗಿಹೋದೆನೇ... ಎಂಬ ಶಂಕೆಯು ನನ್ನೊಳಗೆದ್ದು ಕುಣಿಯಿತು. ಅದೇ ಹೊತ್ತಿನಲ್ಲಿ, ನಾನು ಮತ್ತೊಮ್ಮೆ ವಾಚು ನೋಡಿಕೊಂಡು ಓಡುವ ಸಮಯವನ್ನು ತಡೆದೇಬಿಟ್ಟೇನೆಂಬ ಉಮೇದಿನಲ್ಲಿ, 'ಒಂದು ಕೆಲಸ ಮಾಡೋಣ. ನನ್ನ ಜೊತೆ ಬಂದುಬಿಡು. ಕ್ಲಾಸೊಳಗೆ ಮುಖ ತೋರಿಸಿ ನಿನ್ನ ಜೊತೆ ನಿಲ್ಲಬಲ್ಲೆ...' ಎಂದು ಹೇಳಿದೆ. 'ಥ್ಯಾಂಕ್ಯು, ಪರಿಧಿ ಸರ್—ಐ ನ್ಯೂ ಯು ವುಡ್ ಒಬ್ಲೈಜ್...' ಅಂತಂದ ಸಲಿಲೆ ನನ್ನೊಡನೆ ಎಲಿವೇಟರಿನತ್ತ ನಡೆದುಬಂದಳು.

ಐದು ಮಹಡಿ ಮತ್ತು ಎರಡು ಕಾರಿಡಾರುಗಳನ್ನು ದಾಟಿ, ತರಗತಿಯನ್ನು ತಲುಪಬೇಕಾಗುವ ಐದೆಂಟು ಮಿನಿಟುಗಳಲ್ಲಿ—ನಮ್ಮ ಮಾತುಕತೆ ಮುಗಿಯಬಹುದೆಂಬ ಉಮೇದು ಈ ಸಲಿಲೆಗಿತ್ತೋ ಇಲ್ಲವೋ, ನನ್ನೊಳಗಂತೂ ಇತ್ತು. ಎಂತಲೇ, ಏನೇ ಆದರೂ, ಅವಳು ಸೂಚಿಸಿದ ಪಾಶ್—ಕಮಿಟಿಗೆ ಮೆಂಬರಾಗುವ ಪ್ರೊಪೋಸಲನ್ನು ಬಿಲ್‌ಕುಲ್ ಒಲ್ಲೆನ್ನುವ ಇರಾದೆಯೊಡನೆ ನಾನು ಅಡಿಬೆಳೆಸಿದೆ.

ಎಲಿವೇಟರಿನ ಅಂತರಂಗವು ಉಳಿದ ಪ್ರಪಂಚದಿಂದ ನಮ್ಮಿಬ್ಬರನ್ನು ಪೂರ್ತಿ ಹೊರತಿರಿಸುವಂತೆ ಮುಚ್ಚಿತು. ನನ್ನ ತರಗತಿಯಿರುವ ತಳಮಹಡಿಯಲ್ಲಿ ತೆರೆಯುವ ಹಾಗೆ, ಎಲ್ಲದಕ್ಕೂ ಕೆಳಗಿನ ಸ್ವಿಚ್ಚೊತ್ತಿದ ಸಲಿಲೆ—ಉಸ್ಸಂತಲೊಮ್ಮೆ ಸಶಬ್ದವಾಗಿ ಉಸುರಿ ಸೂರಿಗೆ ನಿರುಕು ತಾಕಿಸಿ ನಿಂತಳು. ಗಾಳಿಬೆಳಕಿನ ಕತೆಯಿರಲಿ, ಹಲಸರ್ತಿ ಬಹಿರ್ಜಗದೊಡನೆಯ ಮೊಬೈಲು ಸಂಪರ್ಕವನ್ನೂ ಜಡಿದು ಸುಮ್ಮಗಿರಿಸುವಂತೆ